† ಶ್ರೀ ಆರ್. ಗುಂಡೂರಾವ್.—ಇದನ್ನು ನಾನು ಉತ್ತರದಲ್ಲಿ ಹೇಳಿದ್ದೇನೆ. ಇದು ನಮ್ಮ ಇಲಾಖೆಗೆ ಸೇರಿಲ್ಲ. ಅಲ್ಲಿ ನೂರಾರು ಜನ ಪ್ರವಾಸಿಗರು ಬರುತ್ತಾ ಇರುವುದು ನಿಜ. ಇದು ನಮ್ಮ ಇಲಾಖೆಗೆ ಸೇರದೇ ಇರುವ ದೆಸೆಯಿಂದ ನಾವು ಹೆಚ್ಚಿನ ಏರ್ಪಾಟುಗಳನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಅಲ್ಲಿಗೆ ಮೈಸೂರು, ಬೆಂಗಳೂರು ಕಡೆಗಳಿಂದ ನೂರಾರು ಜನ ಪ್ರವಾಸಿಗರು ಬಂದು ಹೋಗುತ್ತಿದ್ದಾರೆ ಎನ್ನುವುದನ್ನು ತಾವು ಒಪ್ಪಿಕೊಂಡಿದ್ದೀರಿ. ಅಲ್ಲಿಗೆ ಹೋಗ ಬೇಕಾದರೆ ರಸ್ತೆ ಇಲ್ಲ, ಊಟ, ವಸತಿಗಳ ಅನುಕೂಲತೆ ಇಲ್ಲದೇ ಇರುವುದರಿಂದ ತಾವು ಅದನ್ನು ಪ್ರವಾಸೋದ್ಯಮ ಇಲಾಖೆಗೆ ಸೇರಿಸಿಕೊಳ್ಳುವುದಕ್ಕೆ ಒಪ್ಪುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಅದು ಹೆಚ್ಚು ಪ್ರವಾಸಿಗರ ಆಕರ್ಷಣೀಯವಾದ ಸ್ಥಳ ಎನ್ನುವುದನ್ನು ನಾನು ಒಪ್ಪುತ್ತೇನೆ. ರಸ್ತೆಗಳನ್ನು ಮಾಡುವುದು ಲೋಕೋಪಯೋಗಿ ಇಲಾಖೆಗೆ ಸೇರಿದಂಥ ವಿಷಯ. ಆದರೂ ಆ ಭಾಗಗಳನ್ನು ನಮ್ಮ ಇಲಾಖೆಗೆ ಸೇರಿಸತಕ್ಕಂಥಾದ್ದು ಸರ್ಕಾರದ ಪರಿಶೀಲನೆಯಲ್ಲಿದೆ

Scarcity of drinking water in Kundagol Town

408. SRI M. S. KATAGI (Kundgol).—Will the Minister for Municipal Administration be pleased to state.—

(*a*) whether the Government are aware that there is acute scarcity of drinking water in Kundagol town, Dharwar District;

(*b*) whether Government are also aware that water supply system from Weerasagar tank has failed in spite of the repairs at the cost of Rs. one lakh;

(*c*) whether Government are aware that some borewells dug during 1977 have also failed;

(*d*) if so, whether Government intend taking up survey of ground water resources around the town and errect water supply system at Kundagol town as quickly as possible ?

SRI H. C. SRIKANTAIAH (Minister for Municipal Administration) —

(*a*) Yes.

(*b*) Yes.

(*c*) No such wells have failed.

(*d*) Yes. Comprehensive water supply scheme with borewells as source at an estimated cost of Rs. 25 lakhs has been got up and is proposed to be taken up during the current year.

ಶ್ರೀ ಎಂ. ಎಸ್. ಕಟಗಿ.—ಕುಂದಗೋಳ ಟೌನಿನಲ್ಲಿ ಸುಮಾರು ೧೫ ಸಾವಿರ ಜನಸಂಖ್ಯೆ ಇದ್ದು ಈಗ ತಾವು ಕೈಗೊಂಡಿರುವ ಯೋಜನೆಯಿಂದ ಅಲ್ಲಿ ಸಾಕಷ್ಟು ನೀರು ದೊರೆಯುತ್ತಿಲ್ಲ. ಆದಕಾರಣ ಕುಡಿಯುವ ನೀರಿನ ಅಭಾವದ ತೀವ್ರತೆಯನ್ನು ಕಂಡುಕೊಂಡು ಇದನ್ನು ಪರಿಹರಿಸಲು ಸರ್ಕಾರದವರು ಮಂಜೂರಾತಿಯನ್ನು ಕೊಟ್ಟು ಆದಷ್ಟು ಜಾಗ್ರತೆಯಾಗಿ ಕಾರ್ಯಗತಗೊಳಿಸುವತ್ತ ಗಮನಕೊಡುವರೇ? ದಯವಿಟ್ಟು ಅದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೆ ಈಗಾಗಲೇ ಇದರ ಬಗ್ಗೆ ೨೫ ಲಕ್ಷ ರೂಪಾಯಿಗಳ ಎಸ್ಟಿಮೇಟ್ ತಯಾರಾಗಿರುತ್ತದೆ. ಅಲ್ಲಿಯ ಪುರಸಭೆಯವರು ಕೊಡಬೇಕಾಗಿದ್ದ ೨.೫ ಲಕ್ಷ ರೂಪಾಯಿ ಗಳನ್ನು ಕೊಟ್ಟಿರುತ್ತಾರೆ. ಆದ್ದರಿಂದ ಈ ವರ್ಷದಿಂದಲೇ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ತಿಳಿಸಬಯಸುತ್ತೇನೆ.

New Agricultural University in the State.

470. SRI M. GANGANNA (Kushtagi).—Will the Minister for Agriculture and Parliamentary Affairs be pleased to state.—

(*a*) whether there is any proposal before the Government to establish another Agricultural University in the State ;

(*b*) the stage at which the process of upgrading the Agricultural Technical College, Raichur into Agricultural Technical Graduates College stands ;

(*c*) the reasons for delay in this behalf so far ?

SRI K. H. RANGANATH(Minister for Agriculture and Parliamentary Affairs).—

(*a*) No.

(*b*) It is under consideration of Government.

(*c*) The question of providing jobs for the students who have passed from the Agricultural Technical College, Raichur is under consideration of Government. If this Technical Institution is upgraded to the college level, then jobs will have to provide to the students coming out from this college also. Since all these problems, in detail, are under consideration the delay caused.

ಶ್ರೀ ಎಂ. ಗಂಗಣ್ಣ.—ಉತ್ತರ ಕರ್ನಾಟಕದಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕು ಎನ್ನುವ ಒಂದು ವಿಷಯವನ್ನು ಕಳೆದ ವಿಧಾನಸಭೆಯಲ್ಲಿ ಸರ್ಕಾರ ನಿರ್ಣಯವನ್ನು ತೆಗೆದುಕೊಂಡಿರುವ ವಿಚಾರ ತಮಗೆ ಗೊತ್ತಿದೆಯೇ ಎಂಬುದನ್ನು ತಿಳಿಸಬೇಕು ?

ಶ್ರೀ ಕೆ.ಎಚ್. ರಂಗನಾಥ್.—ಗತವಿನೇ ಇಸವಿಯಲ್ಲಿ ಉತ್ತರ ಕರ್ನಾಟಕದಲ್ಲಿ ಒಂದು ಕೃಷಿ ವಿಶ್ವ ವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಹೇಳಿ ಸರ್ಕಾರ ನಿರ್ಣಯವನ್ನು ತೆಗೆದುಕೊಂಡಿತ್ತು. ಆದರೆ ಆ ನಿರ್ಣಯ ಇನ್ನೂ ಬೇರೆ ಬೇರೆ ವಿಷಯಗಳ ಮೇಲೆ ಅವಲಂಬಿಸಿರುವಂಥಾದ್ದು ಇದ್ದು ಐ.ಸಿ.ಎ.ಆರ್. ಮತ್ತು ಯು.ಜಿ.ಸಿ. ಕಮಿಷನ್ ಅವರ ಸಹಾಯದ ಮೇಲೆ ಅದು ಅವಲಂಬಿತವಾಗಿರುತ್ತದೆ. ಗತವಿನೇ ಇಸವಿಯಲ್ಲಿ ತೀರ್ಮಾನವನ್ನು ತೆಗೆದುಕೊಂಡು ಎರಡೂ ಸಂಸ್ಥೆಗಳ ನಿಯೋಗದಲ್ಲಿ ಪತ್ರ ವ್ಯವಹಾರ ನಡಾದಿದಮೇಲೆ ಅದರ ಅಗತ್ಯವಿಲ್ಲವೆಂದು ಹೇಳಿದಮೇರೆಗೆ ಅದನ್ನು ಕೈಬಿಡಲಾಗಿದೆ.

ಶ್ರೀ ಎಂ. ಗಂಗಣ್ಣ.—ರಾಯಚೂರು ಕೃಷಿ ತಾಂತ್ರಿಕ ಕಾಲೇಜಿನಲ್ಲಿ ಡಿಪ್ಲೊಮೋ ಕೋರ್ಸ್ ಇರುತ್ತದೆ. ಅಂಥದ್ದೆ ತಮಿಳುನಾಡಿನಲ್ಲಿ ಪದವೀಧರರ ಕಾಲೇಜನ್ನು ತಮಿಳುನಾಡು ಸರ್ಕಾರ ಪ್ರಾರಂಭಿಸಿರುತ್ತದೆ. ಅದೇ ರೀತಿಯಲ್ಲಿ ಇಲ್ಲಿ ಆಂದರೆ ಕರ್ನಾಟಕದಲ್ಲಿ ಏಕೆ ತೆರೆಯಲು ಸಾಧ್ಯವಿಲ್ಲ. ಈ ವರ್ಷ ಪ್ರಾರಂಭಿಸುವ ಬಗ್ಗೆ ತಾವು ಉತ್ತರ ಕೊಡಬಲ್ಲಿರಾ ?

ಶ್ರೀ ಕೆ.ಎಚ್. ರಂಗನಾಥ್.—ಈ ವಿಚಾರ ಸರ್ಕಾರದ ಗಮನದಲ್ಲಿದೆ.